ಓ.ಎಸ್.ನಂ.214/2015
ಡಿ.ಡಬ್ಲ್ಯು-2

**ಸಾಕ್ಷಿಯನ್ನು ದಿಃ06.11.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ. ಎ ಅರ್ ಆರ್ ವಕೀಲರಿಂದ.**

ಸಾಕ್ಷಿ ಇಂದು ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

ಪಾಟೀಸವಾಲುಃ ವಾದಿ ಪರ ಶ್ರೀ ಎಲ್ ವಿ ವಿ ವಕೀಲರಿಂದ

1 ನೇ ಪ್ರತಿವಾದಿ ನನ್ನ ಅತ್ತೆ , 2 ನೇ ಪ್ರತಿವಾದಿ ನನ್ನ ಬಾಮೈದ. ಈ ದಾವೆಯ ಆಸ್ತಿಯ ಬಗ್ಗೆ ತಿಳಿದು ಕೊಂಡಿರುತ್ತೇನೆ. ಈ ದಾವೆಯನ್ನು ವಾದಿಯು ಸ.ನಂ.10/6 ಜಮೀನಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತಾರೆ. ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ನಿಪಿ-4 ಮತ್ತು 5 ರಲ್ಲಿ ಶಿವರಾಮಯ್ಯ, ಕೆಂಪಮ್ಮ, ಮಲ್ಲಮ್ಮ, ಜಯಮ್ಮ, ಮಲ್ಲೇಶ ರವರುಗಳ ಹೆಸರು ಇದೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ಪಹಣಿ ಪತ್ರಿಕೆಯನ್ನು ತೋರಿಸಿದರೆ ಅದರಲ್ಲಿರುವ ನಂಬರ್ ನನಗೆ ಗೊತ್ತಾಗುವುದಿಲ್ಲ. ಸ.ನಂ. 10/6 , 5 ಗುಂಟೆ ವಿಸ್ತೀರ್ಣವನ್ನು ಹೊಂದಿರುತ್ತದೆ. ಸ.ನಂ.10/6 ರ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಗಳ ಹೆಸರು ನಮೂದು ಇಲ್ಲ ಎಂದರೆ ಸರಿಯಲ್ಲ. ಅದು ವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ 10/6 ರ ಪಹಣಿ ಪತ್ರಿಕೆಯಲ್ಲಿ ಯಾರು ಹೆಸರು ಇದೆ ಎಂದು ಬರೆಸಿರುತ್ತೇನೆ. ದಾವಾ ಆಸ್ತಿಯು ಮೂಲದಲ್ಲಿ ಚಿಕ್ಕಗುಡಗಯ್ಯನವರಿಗೆ ಸೇರಿತ್ತು. ವಾದಿಯ ಗಂಡ ಮತ್ತು ಅವರ ತಮ್ಮ ಪಾಲು ವಿಭಾಗ ಮಾಡಿ ಕೊಂಡಾಗ ದಾವಾ ಆಸ್ತಿಯು ವಾದಿಯ ಗಂಡನ ಭಾಗಕ್ಕೆ ಬಂತು ಎಂದರೆ ಸರಿ. ರಾಮಚಂದ್ರ ರವರು ವಾದಿಯ ತಂದೆ ದಾಸೇಗೌಡ ರವರಿಗೆ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಈ ವರ್ಷದ ಪಹಣಿಯನ್ನು ನಾನು ನೋಡಿಲ್ಲ. 1 ನೇ ಪ್ರತಿವಾದಿಯ ಗಂಡ ರಾಮಚಂದ್ರ ರವರಿಂದ ಸ.ನಂ. 10/6 ರಲ್ಲಿ 3 ಗುಂಟೆ ಜಮೀನನ್ನು ಖರೀದಿ ಮಾಡಿದ್ದಾರೆ. ಆ ಖರೀದಿ ಪತ್ರವನ್ನು ನಾನು ಓದಿಸಿ ತಿಳಿದು ಕೊಂಡಿಲ್ಲ. ಈ ಬಗ್ಗೆ ನಾನು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಪಂಚಾಯ್ತಿ ದಾಖಲೆಗಳು ಇವೆಯೇ ಎಂದರೆ ಖಾತಾ ಎಕ್ಸ್ ಟ್ರಾಕ್ಟ್ ಇದೆ , ಇ-ಖಾತಾ ಇಲ್ಲ. ಈ ದಾವೆಯಲ್ಲಿ ವಾದಿಯು

ಈ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಬರೆಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ವಾದಿಯ ಗಂಡ ದಾವಾ ಆಸ್ತಿಯನ್ನು ಜೀವನಾಂಶಕ್ಕಾಗಿ ವಾದಿಗೆ ನೀಡಿರುತ್ತಾರೆ ಎಂದು ನಾನು ಬರೆಸಿಲ್ಲ. ದಾವಾ ಆಸ್ತಿಯನ್ನು ರಾಮಚಂದ್ರ ರವರು ವಾದಿಯ ತಂದೆ ದಾವಾ ಗೌಡರಿಗೆ 1979 ರಲ್ಲಿ ಕ್ರಯ ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ನ್ಯಾಯಾಲಯದ ಆದೇಶದ ಮೂಲಕ ವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆಗಿನಿಂದಲೂ ವಾದಿಯೇ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ವಾದಿಯ ತಂದೆ ಒಂದು ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಕೆಂಚನಹಳ್ಳಿ ಗ್ರಾಮಕ್ಕೆ ಸೇರಿದ ಆಸ್ತಿ ಎಂದರೆ ಸರಿ. ನಾನು ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ಹೇಳುವ ಆಸ್ತಿಯು ಬಂಧಿಗೌಡನಪಾಳ್ಯ ಗ್ರಾಮಕ್ಕೆ ಸೇರಿದ ಆಸ್ತಿ ಎಂದರೆ ಸರಿ. ಬಂದಿಗೌಡನಪಾಳ್ಯದಿಂದ - ಕೆಂಪನಹಳ್ಳಿ ಗ್ರಾಮಕ್ಕೆ ಸುಮಾರು ಕ್ಕಾಲು ಕಿ.ಮೀ ದೂರ ಅಂತರ ಇದೆ. ಸದರಿ ಗ್ರಾಮಗಳು ಅಕ್ಕ- ಪಕ್ಕದಲ್ಲಿ ಇದೆ. ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ಬರೆಯಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಪ್ರತಿ ವಾದಿಯ ಹೆಸರಿನಲ್ಲಿ ಯಾವುದೇ ದಾಖಲೆಗಳು ಇಲ್ಲ ಮತ್ತು ಅವರು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯ ಮಾಲೀಕತ್ವವನ್ನು ಹೊಂದಿದ್ದು ಪ್ರತಿವಾದಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.